ಸಾಕ್ಷಿಯನ್ನು ದಿಃ 07.03.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್ ವಾಯ್ ಕೆ ವಕೀಲರಿಂದಃ**

ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎಸ್ ಎಫ್ ಡಿ ವಕೀಲರಿಂದಃ**

1 ರಿಂದ 4 ನೇ ಪ್ರತಿವಾದಿಯರು ಮೃತ ಯಲ್ಲಪ್ಪನ ಮಕ್ಕಳು ಎಂದರೆ ಸರಿ. ಯಲ್ಲಪ್ಪನಿಗೆ ಭೀಮವ್ವ ಎಂಬ ಹೆಂಡತಿ ಇದ್ದಳು ಎಂದರೆ ಸರಿ. 1 ನೇ ವಾದಿ 1 ನೇ ಪ್ರತಿವಾದಿಯ ಮಗಳು ಎಂದರೆ ಸರಿ. 2 ನೇ ವಾದಿ 1 ನೇ ಪ್ರತಿವಾದಿಯ ಪತ್ನಿ ಎಂದರೆ ಸರಿ. 2009 ರಲ್ಲಿ ಯಲ್ಲಪ್ಪನ ಮಕ್ಕಳು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವು 1 ನೇ ಪ್ರತಿವಾದಿಯ ಪಾಲು ವಿಭಾಗಕ್ಕೆ ಬಂದಂತಹ ಸ್ವತ್ತುಗಳು ಎಂದರೆ ಸಾಕ್ಷಿಯು 1 ಎಕರೆ ಯಲ್ಲಪ್ಪನಿಗೆ, 1 ನೇ 2 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ 81/1 ಸಿ 1 ಹಾಗೂ 2 ನೇ ಪ್ರತಿವಾದಿಯ ಜಂಟಿಯಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿ 1 ಎಕರೆ ಜಮೀನು ಹಾಗೂ 2 ನೇ ಪ್ರತಿವಾದಿ 1 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಾ ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ 1 ನೇ ಪ್ರತಿವಾದಿಯ 2 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತು 2 ನೇ ಪ್ರತಿವಾದಿಯ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ಪ್ರಮಾಣ ಪತ್ರದಲ್ಲಿ ಸದರಿ ಸ್ವತ್ತು ಶಿವಪ್ಪನ ಭಾಗಕ್ಕೆ ಬಂದಿತ್ತು ಎಂದು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಬಿಟ್ಟು ಕೊಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಯಲ್ಲಪ್ಪನ ಪಿತ್ರಾರ್ಜಿತ ಸ್ವತ್ತಾಗಿದ್ದರಿಂದ 1 ನೇ ಪ್ರತಿವಾದಿಯು

2 ನೇ ಪ್ರತಿವಾದಿಗೆ ಬಿಟ್ಟು ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ದಿನದಿವರೆಗೂ 1 ಎಕರೆ ಜಮೀನಿನಲ್ಲಿ 1 ನೇ ಪ್ರತಿವಾದಿ ಜಂಟಿ ಸ್ವಾದಿನಲ್ಲಿರುತ್ತಾರೆ ಎಂದರೆ ಸರಿಯಲ್ಲ. ಚನ್ನಪ್ಪನಿಗೆ ವ್ಯವಸಾಯದ ಆದಾಯ ಹೊರತು ಪಡಿಸಿ ಬೇರೇ ಆದಾಯ ಇಲ್ಲ ಎಂದರೆ ಸರಿಯಲ್ಲ.

ಚನ್ನಪ್ಪನಿಗೆ ತನ್ನ ಭಾಗಕ್ಕೆ ಬಂದ ಜಮೀನಿನ ಆದಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ಮೂಲದಿಂದ ಆದಾಯ ಇರುವುದಿಲ್ಲ ಎಂದರೆ ಸರಿ. ಸದರಿ ಆದಾಯದಿಂದಲೇ 1 ನೇ ಪ್ರತಿವಾದಿಯು ರಿ ಸ ನಂ. 1/36 ಕ್ಷೇತ್ರ 1 ಗುಂಟೆ 8 ಆಣೆಯನ್ನು ಕ್ರಯಕ್ಕೆ ಹಿಡಿದಿರುತ್ತಾನೆ ಎಂದರೆ ಸರಿ. ಸದರಿ ಜಮೀನಿನಲ್ಲಿ ವಾದಿಯರಿಗೂ ಸಹ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಸದರಿಯವರಿಗೂ ಹಕ್ಕು ಇರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ವರ್ಷದಿಂದ ವಾದಿಯರು 1 ನೇ ಪ್ರತಿವಾದಿಯಿಂದ ದೂರವಿದ್ದು 2 ನೇ ಪ್ರತಿವಾದಿಯ ಮಕ್ಕಳೇ ಅವರನ್ನು ಸಂರಕ್ಷಣೆ ಮಾಡುತ್ತಾ ಇದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ನಾನು ಸ್ನೇಹಿತ ಎಂದರೆ ಸರಿ. ಚನ್ನಪ್ಪನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 1/36 1 ಗುಂಟೆ 8 ಆಣೆ ಜಮೀನು 1 ನೇ ಪ್ರತಿವಾದಿ ಸ್ವಯಾರ್ಜಿತ ಸ್ವತ್ತು ಎಂದು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು. ವಿ. ಪ್ರಮಾಣ ಪತ್ರದಲ್ಲಿ ಹೇಳಿದ ಮಾಹಿತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: 07.03.2022

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.